***ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ;ಕೊಪ್ಪ***

ಸಿ.ಸಿ. ನಂ. *593/2022*

| | | |
|---|---|---|
| ***ಫಿರ್ಯಾದುದಾರರು*** | ಃ | ಸರ್ಕಾರದ ಪರವಾಗಿ ಕೊಪ್ಪ ಪೊಲೀಸರು |

ವಿರುದ್ಧ

| | | |
|---|---|---|
| ಆರೋಪಿತರು | 1 | ಕೆ.ಪಿ. ರಮೇಶ ಬಿನ್ ಲೇಟ್ ಪುಟ್ಟೇಗೌಡ, 66 ವರ್ಷ, ವ್ಯವಸಾಯ, ವಾಸ ಕೂಸಗೊಳ್ಳಿ, ಗುಣವಂತೆ, ಕೊಪ್ಪ ತಾಲ್ಲೂಕು. |
| | 2 | ಕೆ.ಪಿ. ಚನ್ನಪ್ಪ ಬಿನ್ ಲೇಟ್ ಪುಟ್ಟೇಗೌಡ, 72 ವರ್ಷ, ವ್ಯವಸಾಯ, ವಾಸ ಇಂದಿರಾನಗರ, ಕೊಪ್ಪ ಪಟ್ಟಣ ಮತ್ತು ತಾಲ್ಲೂಕು. |
| | 3 | ಶಿವಪ್ಪ ಬಿನ್ ಲೇಟ್ ಪುಟ್ಟೇಗೌಡ, 67 ವರ್ಷ, ವ್ಯವಸಾಯ, ವಾಸ ಕೂಸಗೊಳ್ಳಿ, ಗುಣವಂತೆ, ಕೊಪ್ಪ ತಾಲ್ಲೂಕು. |
| | 4 | ಶ್ರೀನಿವಾಸ ಬಿನ್ ಲೇಟ್ ಪುಟೇಗೌಡ, 69 ವರ್ಷ, ವಿಶ್ರಾಂತ PDO, ಹಾಲಿ ವ್ಯವಸಾಯ, ವಾಸ ತೀರ್ಥಹಳ್ಳಿ ರಸ್ತೆ, ಕೊಪ್ಪ ಕೋರ್ಟ್ ಹತ್ತಿರ, ಕೊಪ್ಪ ತಾಲ್ಲೂಕು. |

## ದೋಷಾರೋಪಣೆ

ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ, ಬಿ.ಕಾಂ., ಎಲ್.ಎಲ್.ಎಂಃ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 11.03.2022 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಯ ಗುಣವಂತೆ ಗ್ರಾಮ, ಕೂಸುಗೊಳ್ಳಿಯ ಸ.ನಂ. 74/5 ರಲ್ಲಿ ಚಾಸಾ-1 ಸುಜನ್ ರವರ ಭತ್ತದ ಗದ್ದೆಯಲ್ಲಿ ಚಾಸಾ-2 ಶ್ರೀನಿವಾಸ ರವರು ಚಾಸಾ-1 ರವರೊಂದಿಗೆ ಮಾತನಾಡುತ್ತಿದ್ದಾಗ ಆರೋಪಿತರಾದ ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈಯ್ದು ಅವಮಾನ ಮಾಡಿದ್ದೀರಿ. ಇದರಿಂದಾಗಿ ಈ ನಿಮ್ಮಗಳ ಕೃತ್ಯವು ಭಾ.ದಂ.ಸಂ. ಕಲಂ **504 ಸಹವಾಚಕ ಕಲಂ 34** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ ಚಾಸಾ.1 ರವರೊಂದಿಗೆ ಜಗಳ ತೆಗೆದು ನಿಮ್ಮ ಪೈಕಿ 1 ನೇ ಆರೋಪಿತನು ದೊಣ್ಣೆಯಿಂದ ಚಾಸಾ-1 ರವರ ಬಲಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದೀರಿ. ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 324 **ಸಹವಾಚಕ ಕಲಂ 34** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-1 ತಿಳಿಯಿತು

ಆ-2 “

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-1 ಒಪ್ಪಿಕೊಳ್ಳುವುದಿಲ್ಲ ವಿಚಾರಣೆ ಆಗಬೇಕು.

ಆ-2 “ “

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 06.11.2024

ಸಹಿ/- 06.11.2024

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.